ಓಎಸ್ 259/2022

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 10.07.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಬಿ.ಎಸ್. ವಕೀಲರಿಂದ**

ನಾನು ಡಿಪ್ಲೋಮಾ ಫಾರ್ಮಸಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ವಾದ ಪತ್ರದ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ ಎಂದರೆ ಸರಿ. ಈ ದಾವ ದಾಖಲಿಸುವ ಮುನ್ನ ದಿಃ 15.03.2022 ರಂದು ಪ್ರತಿವಾದಿಯು ಚಾಮರಾಜನಗರದ ಮಾನ್ಯ ಜಿಲ್ಲಾ ಮತ್ತು ವಾಣಿಜ್ಯ ನ್ಯಾಯಾಲಯದಲ್ಲಿ ಸಿಓಎಸ್ 1/2022 ರಂತೆ ಒಂದು ದಾವೆಯನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಏಪ್ರೀಲ್ 2022 ರಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದೇನೆ ಎಂದರೆ ಸರಿ. ಈ ದಾವೆಯನ್ನು ದಿಃ 05.11.2022 ರಂದು ದಾಖಲಿಸಿದ್ದೇನೆ ಎಂದರೆ ಸಾಕ್ಷಿಯು ದಾಖಲೆಯಲ್ಲಿ ಇದ್ದರೆ ಆಗಬಹುದು ಎಂದು ನುಡಿಯುತ್ತಾರೆ. ಚಾಮರಾಜನಗರದ ಮಾನ್ಯ ಜಿಲ್ಲಾ ಮತ್ತು ವಾಣಿಜ್ಯ ನ್ಯಾಯಾಲಯದಲ್ಲಿ ನನ್ನ ವಿರುದ್ಧ ದಾಖಲಾಗಿದ್ದ ದಾವೆಯ ಬಗ್ಗೆ ಈ ದಾವೆಯಲ್ಲಿ ನಾನು ತಿಳಿಸಿಲ್ಲ ಎಂದರೆ ಸಾಕ್ಷಿಯು ಆ ನ್ಯಾಯಾಲಯದ ನೋಟೀಸ್ ನನಗೆ ತಡವಾಗಿ ಬಂದಿದ್ದರಿಂದ ತಿಳಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ವಾಣಿಜ್ಯ ದಾವೆಯಲ್ಲಿ ನನ್ನ ಪಾಟೀ ಸವಾಲು ಸಹ ಆಗಿರುತ್ತದೆ ಎಂದರೆ ಸರಿ. ಸದರಿ ವಾಣಿಜ್ಯ ದಾವೆಯಲ್ಲಿನ ದಿಃ 03.07.2023ರ ಪಾಟೀ ಸವಾಲಿನ 7ನೇ ಪುಟದಲ್ಲಿ ನಾನು **"ಸೆಪ್ಟೆಂಬರ್ 2020 ರಲ್ಲಿ ನಾನು ವಾದಿಯಿಂದ ಕೇಳಿ 2 ಅಂಗಡಿಗಳ ಕೆಲಸ ಪೂರೈಸಿದ್ದರಿಂದ ಅದರ ಸ್ವಾಧೀನವನ್ನು ತೆಗೆದುಕೊಂಡೆ ಎಂದರೆ ಸರಿ."** ಎಂದು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ರೀತಿ ವಾಣಿಜ್ಯ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿದ್ದರು ಸಹ ಇಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಎರಡು ಅಂಗಡಿಗಳ ಹೊರತಾಗಿ ಉಳಿದ ದಾವ ಆಸ್ತಿಯ ಸ್ವಾಧೀನವನ್ನು ಪ್ರತಿವಾದಿ ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಎರಡು ಅಂಗಡಿಗಳ ಕೆಲಸವನ್ನು ಹೊರತುಪಡಿಸಿ ಉಳಿದ ದಾವ ಆಸ್ತಿಯಲ್ಲಿ ಇನ್ನು ಕಟ್ಟಡದ ಕಾಮಗಾರಿ ಕೆಲಸ

ಇದ್ದುದ್ದರಿಂದ ದಾವ ಆಸ್ತಿಯ ಉಳಿಕೆ ಕಟ್ಟಡವನ್ನು ನನ್ನ ಸ್ವಾಧೀನಕ್ಕೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

2. ದಿಃ 09.08.2021ರಂದು ಪ್ರತಿವಾದಿಯು ನನ್ನ ವಿರುದ್ಧ ಬೇಗೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು ಎಂದರೆ ಸರಿ. ಆ ಬಗ್ಗೆ ನಾನು ನನ್ನ ವಾದಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ಆ ರೀತಿ ನಮೂದಿಸದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ವಿರುದ್ಧ ಬೇಗೂರು ಪೊಲೀಸ್ ಠಾಣೆಗೆ ದೂರು ನೀಡಿದ ಸಂದರ್ಭದಲ್ಲಿ ನಾನು ಪೊಲೀಸ್ ಠಾಣೆಗೆ ಹಾಜರಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಒಂದು ಹೇಳಿಕೆಯ ದೃಡೀಕೃತ ನಕಲನ್ನು ತೋರಿಸಿ ಇದೇ ಆ ಹೇಳಿಕೆ ಎಂದು ಕೇಳಲಾಗಿ ಸಾಕ್ಷಿಯು ನೋಡಿ ಹೌದು ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ 1 ಎಂದು ಗುರ್ತಿಸಲಾಯಿತು. ನಿಡಿ 1 ರಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನಾನು ದಾವ ಆಸ್ತಿಯಲ್ಲಿನ 2 ಅಂಗಡಿಗಳನ್ನು ಹೊರತುಪಡಿಸಿ ಉಳಿದ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದಿದ್ದರೂ ಸಹ ಸತ್ಯವನ್ನು ಮರೆ ಮಾಚಿ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

3. ಪ್ರತಿವಾದಿಯು ದಾವ ಆಸ್ತಿಯಲ್ಲಿ ಕಟ್ಟಡ ಕಟ್ಟುವಾಗ ಕಟ್ಟಡದ ಸಾಮಗ್ರಿಗಳನ್ನು ನೋಡಿಕೊಳ್ಳಲು ಒಬ್ಬ ವಾಚ್ ಮ್ಯಾನ್ ನ್ನು ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಕಟ್ಟಡದ ಗೋಡೆ ಎತ್ತರವಾದ ಮೇಲೆ ಕಟ್ಟಡಕ್ಕೆ ಬಾಗಿಲು ಹಾಕಿಕೊಂಡು ವಾಚ್ ಮ್ಯಾನ್ ಬೀಗ ಹಾಕಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ದಾವ ಆಸ್ತಿಯ ಕಟ್ಟಡದ ಕೆಲಸವು 2017 ರಿಂದ 2022 ರ ವರೆಗೆ ನಡೆದಿರುತ್ತದೆ. ಕಟ್ಟಡದ ಪರವಾನಿಗೆಯನ್ನು ರಿನಿವ್ ಮಾಡಿಸದ ಕಾರಣ ಕಟ್ಟಡದ ಕೆಲಸ ನಿಧಾನವಾಗಿದೆ ಎಂದರೆ ಸಾಕ್ಷಿಯು 2017 ಜೂನ್ ನಲ್ಲಿಕಟ್ಟದ ಪರವಾನಿಗೆ ಪಡೆದಿದ್ದು ಅದು 6 ತಿಂಗಳುಗಳಲ್ಲಿ ಕೊನೆಗೊಂಡಿರುತ್ತದೆ, ಪುನಃ 02.04.2018 ರಂದು ಕಟ್ಟಡದ ಪರವಾನಿಗೆಯನ್ನು ರಿನಿವ್ ಮಾಡಿಸಿದ್ದೇನೆ ಎಂದು ನುಡಿಯುತ್ತಾರೆ. ನಂತರದಲ್ಲಿ ಅಬ್ದುಲ್ ಗಫಾರ್ ಎಂಬುವವರನ್ನು ನಾವು ದಾವ ಆಸ್ತಿಯ ಕಟ್ಟಡವನ್ನು ಕಟ್ಟಬಾರದೆಂದು ದಾವೆ

ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಇಲ್ಲ ನಾನೇ ಅವರ ಮೇಲೆ ನಮ್ಮ ಕಟ್ಟಡದ ಕೆಲಸಕ್ಕೆ ಅಡ್ಡಿಪಡಿಸಿದರು ಎಂದು ದಾವೆ ದಾಖಲಿಸಿದ್ದೆ ಎಂದು ನುಡಿಯುತ್ತಾರೆ. ಆ ಕಾರಣದಿಂದಲೂ ಸಹ ದಾವ ಆಸ್ತಿಯ ಕಟ್ಟಡದ ಕೆಲಸ ನಿಧಾನಾವಾಯಿತು ಎಂದರೆ ಸರಿ. ಸದರಿ ದಾವೆ ನಮ್ಮ ಪರವಾಗಿ ತೀರ್ಪಾಗಿರುತ್ತದೆ. 2020 ರಿಂದ 2022 ರವರೆಗೆ ಕೋವಿಡ್ ಬಂದು 2 ವರ್ಷಗಳ ಕಾಲ ಲಾಕ್ ಡೌನ್ ಆಗಿತ್ತು ಎಂದರೆ ಸರಿಯಲ್ಲ. ಸದರಿ ಲಾಕ್ ಡೌನ್ ಕಾರಣದಿಂದಲೂ ಸಹ ಯಾರು ಕೆಲಸಗಾರರು ಬಾರದೇ ದಾವ ಆಸ್ತಿಯ ಕಟ್ಟಡದ ಕೆಲಸ ವಿಳಂಬವಾಗಿದೆ ಎಂದರೆ ಸಾಕ್ಷಿಯು ಆ ಸಮಸ್ಯೆ ಇರಲಿಲ್ಲ ಎಂದು ನುಡಿಯುತ್ತಾರೆ.

4. ದಾವ ಆಸ್ತಿಯಲ್ಲಿ ಕಟ್ಟಡ ಕಟ್ಟಲು ಪ್ರತಿವಾದಿಗೆ ಸ್ವಾಧೀನ ಕೊಟ್ಟು ಯಾವಾಗ ವಾಪಸ್ ಸ್ವಾಧೀನ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ನಾವು ಪ್ರತಿವಾದಿಗೆ ದಾವ ಆಸ್ತಿಯ ಸ್ವಾಧೀನವನ್ನು ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ದಿಃ 29.11.2017 ರಂದು ಕಟ್ಟಡ ಕಟ್ಟಲು ಆದ ಕರಾರಿನಲ್ಲಿ ಸ್ವಾಧೀನವನ್ನು ನಾನೇ ಉಳಿಸಿಕೊಂಡಿರುವುದಾಗಿ ನಮೂದು ಇದೆಯಾ ಎಂದರೆ ಸಾಕ್ಷಿಯು ಬರೆದಿಲ್ಲ, ಸಾಕ್ಷಿ ಮುಂದುವರೆದು ನಾನು ಸ್ವಾಧೀನವನ್ನು ಪ್ರತಿವಾದಿಗೆ ಕೊಟ್ಟಿಲ್ಲ ಮತ್ತು ಆ ವಿಚಾರದ ಬಗ್ಗೆ ಯಾರು ಪ್ರಶ್ನೆ ಎತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಿಃ 29.11.2017ರ ಕರಾರು ಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿ. ದಿಃ 29.11.2017 ರ ಕರಾರಿನ ಪ್ರಕಾರ ನಾನು ದಾವ ಆಸ್ತಿಯ ಸ್ವಾಧೀನವನ್ನು ಪ್ರತಿವಾದಿಗೆ ವಹಿಸಿಕೊಟ್ಟಿದ್ದೆ ಎಂದರೆ ಸುಳ್ಳು. ಅದಕ್ಕೆ ಪೂರಕವಾಗಿ ನಾನು ವಾಣಿಜ್ಯ ದಾವೆಯಲ್ಲಿ ಪ್ರತಿವಾದಿಯಿಂದ 2 ಅಂಗಡಿಗಳನ್ನು ಮಾತ್ರ ಸ್ವಾಧೀನ ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಣಿಜ್ಯ ದಾವೆಯಲ್ಲಿ ದಾಖಲಾಗಿರುವ ಪಾಟೀ ಸವಾಲು ನನ್ನ ಹೇಳಿಕೆಯ ಮೇರೆಗೆ ದಾಖಲಾಗಿದೆ ಎಂದರೆ ಸರಿ.

5. ಈ ದಾವ ದಾಖಲಿಸಿದ ದಿನಾಂಕದಂದು ನಾನು ದಾವ ಆಸ್ತಿಯ ಪೈಕಿ 2 ಅಂಗಡಿಗಳನ್ನು ಹೊರತುಪಡಿಸಿ ಉಳಿದ ದಾವ ಆಸ್ತಿಯಲ್ಲಿ ಸ್ವಾಧೀನ ಇಲ್ಲದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರಿನ ಪ್ರಕಾರ ಕಟ್ಟಡ ಕಾಮಗಾರಿಯ ಸಂಪೂರ್ಣ ಹಣವನ್ನು ನಾನು ಪ್ರತಿವಾದಿಗೆ ಪಾವತಿ ಮಾಡಿಲ್ಲ ಎಂದರೆ

ಸರಿಯಲ್ಲ. ಆ ಬಗ್ಗೆ ಹಣ ವಸೂಲಾತಿಗಾಗಿ ಪ್ರತಿವಾದಿಯು ನನ್ನ ವಿರುದ್ಧ ವಾಣಿಜ್ಯ ದಾವೆ ದಾಖಲು ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿಯಿಂದ ಅಕ್ರಮ ಲಾಭ ಪಡೆಯಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ